# ಬಾಗಿಲು ಮುಚ್ಚಿದ ಸ್ಕೈಪ್



ಒಂದು ಕಾಲದಲ್ಲಿ ಜಗತ್ತಿನ ಎಲ್ಲ ದಿಕ್ಕುಗಳ ಜನರನ್ನು ವಿಡಿಯೊ ಕರೆ ಮೂಲಕ ಬೆಸೆಯುತ್ತಿದ್ದ ಸ್ಕೈಪ್ ಈಗ ಅಧಿಕೃತವಾಗಿ ಸ್ಥಗಿತಗೊಂಡಿದ್ದು, 'ಟೀಮ್ಸ್' ಬಾಗಿಲು ತೆರೆದುಕೊಂಡಿದೆ.

■ ಶಶಿಕುಮಾರ್ ಸಿ.

ಟೆಕ್ ವಲಯದಲ್ಲಿ ಅನೇಕ ಮೈಲುಗಲ್ಲು ಸಾಧಿಸಿರುವ ಮೈಕ್ರೊಸಾಫ್ಟ್ ಈಚೆಗೆ ತನ್ನ ವಿಡಿಯೊ ಕರೆ ಪ್ಲಾಟ್‌ಫಾರ್ಮ್ ಆದ 'ಸ್ಕೈಪ್' ಅನ್ನು ಅಧಿಕೃತವಾಗಿ ಸ್ಥಗಿತಗೊಳಿಸಿದೆ. ಗ್ರಾಹಕರ ಆದ್ಯತೆಗಳು ಬದಲಾಗುತ್ತಿರುವ ಕಾರಣದಿಂದ ಸ್ಕೈಪ್ ಸ್ಥಗಿತಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮೈಕ್ರೊಸಾಫ್ಟ್ ಕೆಲ ತಿಂಗಳ ಹಿಂದೆ ತನ್ನ ಬ್ಲಾಗ್‌ನಲ್ಲಿ ಪೋಸ್ಟ್ ಮಾಡಿತ್ತು.

ಮೈಕ್ರೊಸಾಫ್ಟ್ ತನ್ನ ಸಂವಹನ ಸೇವೆಗಳನ್ನು ಹೆಚ್ಚು ಸುವ್ಯವಸ್ಥಿತಗೊಳಿಸುವ ಮತ್ತು ಗ್ರಾಹಕರ ಅಗತ್ಯಗಳಿಗೆ ಅನುಗುಣವಾಗಿ ರೂಪಿಸುವ ಪ್ರಯತ್ನದ ಭಾಗವಾಗಿ ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ. ಸ್ಕೈಪ್‌ಗೆ ಪರ್ಯಾಯವಾಗಿ 'ಟೀಮ್ಸ್' ಪ್ಲಾಟ್‌ಫಾರ್ಮ್ ಬಲಪಡಿಸಲು ಮೈಕ್ರೊಸಾಫ್ಟ್ ಹೆಚ್ಚು ಗಮನಹರಿಸಿದೆ. ಈ ವೇದಿಕೆಯನ್ನು ಮೈಕ್ರೊಸಾಫ್ಟ್ ತನ್ನ ಕೇಂದ್ರ ಸಂವಹನ ಮತ್ತು ಸಹಯೋಗ ಕೇಂದ್ರವನ್ನಾಗಿ ಮಾಡುವತ್ತ ಚಿತ್ತಹರಿಸಿದೆ.

ಟೀಮ್ಸ್ ಕ್ಲೌಡ್ ಆಧರಿತ ಪ್ಲಾಟ್‌ಫಾರ್ಮ್ ಆಗಿದ್ದು, ತಂಡವಾಗಿ ಕಾರ್ಯನಿರ್ವಹಿಸುವವರು ಮಾತುಕತೆ, ಸಭೆ ನಡೆಸಲು ಆಡಿಯೊ ಮತ್ತು ವಿಡಿಯೊ ಕರೆ ಆಧರಿತವಾಗಿ ಸೇವೆ ಒದಗಿಸುವ ವೇದಿಕೆಯಾಗಿದೆ. ಇನ್‌ಸ್ಟಂಟ್ ಮೆಸೇಜ್, ಆನ್‌ಲೈನ್ ಮೀಟಿಂಗ್, ಫೈಲ್ ಶೇರಿಂಗ್ ಹಾಗೂ ಮೈಕ್ರೊಸಾಫ್ಟ್‌ನ ಉಳಿದೆಲ್ಲ ಆ್ಯಪ್‌ಗಳನ್ನು ನಿರ್ವಹಿಸಲು ಇದು ಅನುವು ಮಾಡಿಕೊಡುತ್ತದೆ.

ಸ್ಕೈಪ್ ಸ್ಥಗಿತದ ಸುಳಿವು ನೀಡಿದಾಗಲೇ ಹೊಸ ಬಳಕೆದಾರರಿಗಾಗಿ ಸ್ಕೈಪ್ ಕ್ರೆಡಿಟ್ ಮತ್ತು ಕರೆ ಮಾಡುವ ವಿಶೇಷ ಯೋಜನೆಗಳನ್ನು ಒದಗಿಸುವುದನ್ನು ನಿಲ್ಲಿಸಲಾಗಿತ್ತು. ಆದಾಗ್ಯೂ ಅಸ್ತಿತ್ವದಲ್ಲಿರುವ ಚಂದಾದಾರರಿಗೆ ಬಿಲ್ಲಿಂಗ್ ಸರ್ಕಲ್ ಅಂತ್ಯದವರೆಗೆ ಸ್ಕೈಪ್ ಸೇವೆ ಮುಂದುವರೆಯಲಿದೆ. ಚಂದಾದಾರಿಕೆ ಅವಧಿ ಮುಗಿದ ತಕ್ಷಣ ಸೇವೆ ಕೊನೆಗೊಳ್ಳಲಿದೆ.

ಸ್ಕೈಪ್‌ನಿಂದ 'ಟೀಮ್ಸ್'ನತ್ತ ಚಿತ್ತಹರಿಸಿರುವ ಬಳಕೆದಾರರಿಗೆ ಅನುಕೂಲ ಆಗಲೆಂದು ಮೈಕ್ರೊಸಾಫ್ಟ್ ಟ್ರಾನ್ಸಿಷನ್ ವಿಂಡೊ ಒದಗಿಸಿದೆ. ಅದನ್ನು ಬಳಸಿಕೊಂಡು ಬಳಕೆದಾರರು ತಮ್ಮ ಸ್ಕೈಪ್‌ನ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ನೊಂದಿಗೆ 'ಟೀಮ್ಸ್'ಗೆ ಸೈನ್ ಇನ್ ಆಗಬಹುದು. ಲಾಗಿನ್ ಆದ ಬಳಿಕ ಸ್ಕೈಪ್ ಬಳಕೆದಾರರ ಪ್ರೊಫೈಲ್ ಸೆಟ್ಟಿಂಗ್ಸ್ ಮತ್ತು ಡೇಟಾವನ್ನು ಅಟೊಮೆಟಿಕ್ ಆಗಿ ಟೀಮ್ಸ್‌ಗೆ ವರ್ಗಾಯಿಸಲಾಗುತ್ತದೆ. ವಲಸೆ ಹೋಗಲು ಬಯಸದ ಬಳಕೆದಾರರು ತಮ್ಮ ಚಾಟ್ ಹಿಸ್ಟರಿ, ಕನೆಕ್ಟರ್ಸ್ ಮತ್ತು ಕಾಲ್ ಡೇಟಾವನ್ನೂ ಎಕ್ಸ್‌ಪೋರ್ಟ್ ಮಾಡಬಹುದು.

ಸ್ಕೈಪ್‌ನಂತೆಯೇ 'ಟೀಮ್ಸ್' ಕ್ಯಾಲೆಂಡರ್ ಇಂಟಿಗ್ರೇಷನ್, ಕಮ್ಯುನಿಟಿ ಸ್ಪೇಸೇಜ್ ಮತ್ತು ಇತರೆ ಸುಧಾರಿತ ಕೊಲಾಬರೇಷನ್ ಟೂಲ್ಸ್ ಸೇರಿದಂತೆ ಹಲವು ಪ್ರಮುಖ ಫೀಚರ್‌ಗಳನ್ನು ಒಳಗೊಂಡಿದೆ. ಬಹುಮುಖ ಮತ್ತು ಬಳಕೆದಾರಸ್ನೇಹಿ ಅನುಭವವನ್ನು ಕೊಡುತ್ತದೆ.

ಸ್ಕೈಪ್‌ಗೆ ಪರ್ಯಾಯವಾಗಿ 'ಟೀಮ್ಸ್' ಬಳಸಲು ಇಷ್ಟವಾಗದಿದ್ದಲ್ಲಿ ಇದೇ ರೀತಿಯ ಹಲವಾರು ಪ್ಲಾಟ್‌ಫಾರ್ಮ್‌ಗಳು ಲಭ್ಯವಿದ್ದು, ಅವುಗಳನ್ನು ಬಳಸಬಹುದಾಗಿದೆ. ಆ ಪೈಕಿ, ಗೂಗಲ್ ಮೀಟ್ ಮತ್ತು ಜೂಮ್ ಪ್ರಮುಖವಾದವು. ಇವು ವಿಡಿಯೊ ಕಾಲ್ ಮತ್ತು ವರ್ಚುವಲ್ ಮೀಟಿಂಗ್ಸ್ ಬಳಕೆದಾರರಲ್ಲಿ ಬಹಳ ಜನಪ್ರಿಯವಾಗಿವೆ.

2003ರಲ್ಲಿ ಪ್ರಾರಂಭವಾದ ಸ್ಕೈಪ್, ಎರಡು ದಶಕಗಳ ಕಾಲ ವಿಡಿಯೊ ಕರೆಗಳಿಗಾಗಿ ವಿಶ್ವದಾದ್ಯಂತ ಜನ ಬಳಸುತ್ತಿದ್ದ ಪ್ರಮುಖ ಆನ್‌ಲೈನ್ ವೇದಿಕೆಯಾಗಿತ್ತು. ಆದರೆ ವಾಟ್ಸ್‌ಆ್ಯಪ್ ಮತ್ತು ಫೇಸ್‌ಟೈಮ್‌ನಂತಹ ಆ್ಯಪ್‌ಗಳ ಆಗಮನ ಮತ್ತು ಅವುಗಳ ಜನಪ್ರಿಯತೆಯಿಂದಾಗಿ ಸ್ಕೈಪ್ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತ್ತು. ಈ ಕ್ಷೇತ್ರದಲ್ಲಿ ಮತ್ತೆ ಪುಟಿದೇಳಲು ಮೈಕ್ರೊಸಾಫ್ಟ್ 'ಟೀಮ್ಸ್'ನತ್ತ ಹೆಚ್ಚು ಗಮನಹರಿಸುತ್ತಿದೆ. ■

## ಸ್ಟಾರ್‌ಲಿಂಕ್‌ಗೆ ಅನುಮತಿ



ಎಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಗೆ ಭಾರತದಲ್ಲಿ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆಗಳನ್ನು ನಿರ್ವಹಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ನಿರ್ಣಾಯಕ ಷರತ್ತುಗಳನ್ನು ಅನುಸರಿಸಲು ಸ್ಟಾರ್‌ಲಿಂಕ್ ಒಪ್ಪಿಕೊಂಡ ನಂತರ ದೂರಸಂಪರ್ಕ ಇಲಾಖೆ ಅನುಮತಿ ನೀಡಿದೆ.

ಏರ್‌ಟೆಲ್ ಜೊತೆಗೂಡಿ ಸ್ಟಾರ್‌ಲಿಂಕ್ ತನ್ನ ಸೇವೆಯನ್ನು ಭಾರತದಲ್ಲಿ ಒದಗಿಸಲಿದೆ. ಭಾರತದಲ್ಲಿ ಜಿಎಂಪಿಸಿಎಸ್, ವಿಎಸ್‌ಎಟಿ ಮತ್ತು ಐಎಸ್‌ಪಿ ಲೈಸೆನ್ಸ್‌ಗಾಗಿ ಸ್ಟಾರ್‌ಲಿಂಕ್‌ಗೆ ದೂರ ಸಂಪರ್ಕ ಇಲಾಖೆ ಅನುಮತಿ ನೀಡಿದೆ. ಹೊಸ ಪರಿಷ್ಕೃತ ಭದ್ರತಾ ಮಾರ್ಗಸೂಚಿಗಳ ಅಡಿಯಲ್ಲಿ ಲೈಸೆನ್ಸ್ ಷರತ್ತುಗಳು ಮತ್ತು ಭದ್ರತಾ ಪ್ರೋಟೊಕಾಲ್‌ಗಳನ್ನು ಪೂರೈಸುವ ಭರವಸೆಯನ್ನು ಕಂಪನಿ ನೀಡಿದೆ. ಕೇಂದ್ರ ಸರ್ಕಾರದ ಎಲ್ಲಾ ಷರತ್ತುಗಳನ್ನು ಪೂರೈಸಲು ಸಾಧ್ಯವಾದ ನಂತರ ಅಂತಿಮ ಲೈಸೆನ್ಸ್ ಅನ್ನು ಕಂಪನಿಗೆ ನೀಡಲಾಗುತ್ತದೆ ಎಂದು ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟಾರ್‌ಲಿಂಕ್ ಸೇವೆಗಳನ್ನು ಏರ್‌ಟೆಲ್ ಮೂಲಕ ಉದ್ಯಮಿಗಳಿಗೆ, ಸಮುದಾಯ, ಶಾಲೆ, ಆರೋಗ್ಯ ಕೇಂದ್ರಗಳು ಹಾಗೂ ದುರ್ಗಮ ಸ್ಥಳಗಳಿಗೆ ನೇರವಾಗಿ ಉಪಗ್ರಹ ಆಧರಿತ ಅಂತರ್ಜಾಲ ಸೇವೆ ಒದಗಿಸಬಹುದಾಗಿದೆ. ಈ ಸೇವೆ ಆರಂಭಿಸಲು ಸ್ಟಾರ್‌ಲಿಂಕ್ ಬಹುದಿನಗಳಿಂದ ಸರ್ಕಾರದ ಅನುಮತಿಗಾಗಿ ಕಸರತ್ತು ಮಾಡುತ್ತಿತ್ತು. ■